**O.S** 45/2018

**PW**-1

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ 08.11.2022 ರಂದು ಪ್ರಮಾಣ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ನಂಬರ್ 1 ಮತ್ತು 2 ರವರ ಪರ ವಕೀಲರಾದಃ ಶ್ರೀ **KMS** ರವರಿಂದ

3 ನೇ ಪ್ರತಿವಾದಿಯು ಬಿಡಿಸಿಕೊಂಡಿರುವ ಚಿನ್ನದ ಸಂಬಂಧವಾಗಿಯೇ ನಾವು ಮಾನ್ಯ ಜಿಲ್ಲಾ ಗ್ರಾಹಕರ ನ್ಯಾಯಾಧೀಕರಣ ಚಾಮರಾಜನಗರದಲ್ಲಿ ದೂರನ್ನು ಸಲ್ಲಿಸಿದ್ದೆ ಎಂದರೆ ನಿಜ. ಸದರಿ ಪ್ರಕರಣದ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ಪಿರ್ಯಾದಿಯು ಎಂದು ವಜಾ ಆಗಿರುತ್ತದೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯು ಸೂಕ್ತ ದಾಖಲಾತಿಗಳನ್ನು 1 ನೇ ಪ್ರತಿವಾದಿಯವರಿಗೆ ನೀಡಿದ ಕಾರಣ ಅವರು ಚಿನ್ನವನ್ನು 3 ನೇ ಪ್ರತಿವಾದಿಯ ಸ್ವಾಧೀನಕ್ಕೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ದಾಖಲಾತಿಗಳನ್ನು 3 ನೇ ಪ್ರತಿವಾದಿಯವರು 1 ನೇ ಪ್ರತಿವಾದಿಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸುಳ್ಳು ದಾಖಲಾತಿಗಳನ್ನು ನೀಡಿದ್ದರೆ 1 ನೇ ಪ್ರತಿವಾದಿಯು ಚಿನ್ನವನ್ನು 3 ನೇ ಪ್ರತಿವಾದಿಗೆ ನೀಡುತ್ತಿರಲಿಲ್ಲ ಎಂದರೆ ಸರಿಯಲ್ಲ.

ನನ್ನ ತಾಯಿ ನನ್ನ ತಂದೆಯ ಮರಣದ ನಂತರ ನಾನು ಪ್ರಬೇಟನ್ನು ಕೋರಿ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ತಾವು 1 ನೇ ಪ್ರತಿವಾದಿಯ ಕಛೇರಿಗೆ ಹೋಗಿ ತಮಗೆ ಚಿನ್ನವನ್ನು ನೀಡುವಂತೆ ಕೋರಿರುವುದಾಗಿ ನುಡಿಯುತ್ತಾರೆ. ವಾದಿಗಳು ಮೃತ ಚಿಕ್ಕಅಂಕಯ್ಯನ ವಾರಸುದಾರರು ಎಂಬುದರ ಬಗ್ಗೆ ಸೂಕ್ತ ಇಲಾಖೆಯಿಂದ ಪ್ರಮಾಣ ಪತ್ರವನ್ನು ಪಡೆದಿರುವುದಿಲ್ಲ ಸಾಕ್ಷಿಯು ಮುಂದುವರೆದು ತಮ್ಮ ಬಳಿ ಆಧಾರ್ ಕಾರ್ಡ್ ರೇಷನ್ ಕಾರ್ಡ್ ಇತ್ಯಾದಿ ದಾಖಲೆಗಳು ಇವೆ ಎಂದು ನುಡಿಯುತ್ತಾರೆ. ನಾವು ನಮ್ಮ ತಂದೆಯ ಮರಣ ಪ್ರಮಾಣ ಪತ್ರವನ್ನು ಮತ್ತು ವಂಶವೃಕ್ಷವನ್ನು ತೆಗೆದುಕೊಂಡಿರುತ್ತೇವೆ. ವಾದಿಗಳು ಚಿಕ್ಕ ಅಂಕಯ್ಯ ಇವರ ವಾರಸುದಾರರು ಅಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಗಳಿಗೂ ಹಾಗೂ 3 ನೇ ಪ್ರತಿವಾದಿಗೆ 1 ನೇ

ಪ್ರತಿವಾದಿಯವರು ನೀಡಿರುವಂತಹ ಚಿನ್ನಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯ ಕಡೆಯಿಂದ ಯಾವುದೇ ಸೇವಾ ನ್ಯೂನ್ಯತೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

08.11.2022.
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.